'ಬೆಳಿಗ್ಗೆ ನಾಲ್ಕಕ್ಕೆ ಬಿಟ್ಟೂ ಕೂಡ ಇಷ್ಟು ತಡ ಆಯ್ತಾ? ಗಾಡಿ ಏನಾರ ಕೆಟ್ಟು ನಿಂತಿತ್ತಾ?' ಎಂದು ಸಯ್ಯದನಿಗೆ ಚುಚ್ಚುವಂತೆ ಹೇಳಿದ. ಹಿಂದೆಯೇ ಇದ್ದ ಸಯ್ಯದನ ಹೆಂಡತಿ 'ಮಧ್ಯೆ ಟನ್ನಿಗೆ ಅಂತಾ ಗದಗದಲ್ಲಿರೋ ನಮ್ಮ ತಂಗಿ ಮನೀಗೋಗಿ ಬಂದ್ವಿ. ಅದಕ್ಕ ಲೇಟಾತು' ಎಂದು ತಿಪ್ಪೆ ಸಾರಿಸುವಳಂತೆ ಹೇಳಿದಳು. ಸಕೀನಾ ಅಬ್ರಾಮನಿಗೆ 'ಸಾಕು ನಿಲ್ಲಿಸು' ಎಂದು ಸೂಚಿಸುವಂತೆ ಕೈ ಚಿವುಟಿದಳು. 'ಪರವಾಗಿಲ್ಲ ಬಿಡ್ರಿ ಭಾಬಿ. ವಿಸಿಟಿಂಗ್ ಅವರ್ಸ್ ಶುರುವಾಗೊ ಕರೆಕ್ಟ ವ್ಯಾಳ್ಯಾಕ ಬಂದೀರಿ' ಎಂದು ಮತ್ತೊಮ್ಮೆ ಕುಟುಕಿ ಲಿಫ್ಟಿನತ್ತ ನಡೆಸಿಕೊಂಡು ಹೋಗಿ ಅದು ಕೆಳಮಹಡಿಗೆ ಬರುವುದನ್ನೆ ಕಾಯುತ್ತಾ ನಿಂತ. 'ಬಾಬಾಗ ಬ್ಲಡ್ ಕಡಿಮಿ ಐತಂತೆ. ಎಬಿ ಪಾಸಿಟಿವ್. ನನಿಗೆ ಗೊತ್ತಿರೊ ವಾಟ್ಸಪ್ ಗ್ರೂಪಿನೊಳಗೆಲ್ಲ ಮೆಸೆಜು ಹಾಕೀನಿ...' ಎನ್ನುವ ಮಾತನ್ನ ಮಧ್ಯಕ್ಕೆ ಮುರಿದ ಅವನ ಭಾಬಿ 'ಅರೆ... ಇವ್ರದ್ದು ಬಿ ಪಾಸಿಟಿವ್, ನಂದು ಎಬಿ ನೆಗೆಟಿವ್... ಇಲ್ಲಾಂದ್ರ ನಾವಾ ಕೊಡ್ಬೊದಾಗಿತ್ತು. ರಾಮ ನಿಂದ್ಯಾವ ಗ್ರೂಪಲೋ?'

'ನಂದು ಬಾಂಬೆ ಬ್ಲಡ್ ಗ್ರೂಪೈತಿ ಭಾಬಿ. ನನ್ನ ರಕ್ತದ ಗುಂಪಿರೋರು ವಿರಳಾತಿ ವಿರಳ. ರಹೀಮ ಭಯ್ಯಾನ್ನು ಒಂದ್ಸಲ ಕೇಳಿ ನೋಡಿದ್ರಾಯ್ತು ತಡಿ. ಆತ ಸಾಯಂಕಾಲ ಬರ್ತಾನ ಅನಿಸ್ತತಿ' ಎಂದು ಹೇಳುವ ಹೊತ್ತಿಗೆ ಮೂರನೆ ವಾರ್ಡ್ ತಲುಪಿದ್ದರು. ಅಬ್ರಾಮನ ಅಮ್ಮ ರುಕೀಯಾ, ಸಾಕುತಾಯಿ ಸಕೀನಾ, ಸಯ್ಯದನ ಹೆಂಡತಿ ಮತ್ತವರ ಮೂರು ಮಕ್ಕಳು ಬಡೇಬಾ ಮುಹಮ್ಮದನನ್ನ ಸುತ್ತುವರೆದಿದ್ದರು. ಸಯ್ಯದನ ಹೆಂಡತಿ 'ನಿಮ್ಮ ಮಗ ಸಯ್ಯದ್ ಬಂದಾರ ನೋಡ್ರಿ ಮವಾ...' ಎಂದು ತನಗೀಗ ಸಿಕ್ಕ ಅವಕಾಶವನ್ನು ಸರಿಯಾದೇ ಬಳಸಿಕೊಳ್ಳುತ್ತಿದ್ದಳು. 'ಯಪಾ... ಬಂದ್ಯಾ? ಇದನ್ನ ನೋಡವಾ ಕಳ್ಳ ಅನ್ನಾದು. ಕಳ್ಳಿಗೆಲ್ಲಿ ಬಿಡ್ಗಡಿಯಕೆತಿ ಸೊಸಿಯೆ?' ಎಂದು ಕಣ್ಣಲ್ಲಿ ನೀರು ತುಂಬಿಕೊಂಡ ಮುಹಮ್ಮದನನ್ನ ನೋಡಿ ರುಕಿಯಾಳಿಗೂ, ರಾಮನಿಗೂ ಹೊಟ್ಟೆಯಲ್ಲಿ ಖಾರದಪುಡಿ ಕಲೆಸಿದಂಗಾಯ್ತು. ರುಕಿಯಾ ಇದನ್ನು ಮುಂದುವರಿಯಗೊಡದೆ 'ಹೌದು ಅದ್ಕ ಗಾದಿ ಮಾಡಿರದು; ತಿಪ್ಪಿಗಿ ಹೇಸ್ಗಿಲ್ಲ, ಕಳ್ಳಿಗಿ ನಾಚ್ಕಿಲ್ಲ ಅಮ್ತ' ಎಂದು, ಮುಳ್ಳಿನಂತಾಒಂದು ಕೃತಕ ನಗೆ ತೇಲಿಬಿಟ್ಟಳು.

***

ಸಂಜೆಯ ನಾಲ್ಕು ಗಂಟೆಗೆ ಆಸ್ಪತ್ರೆಯ ಆವರಣದಲ್ಲಿ ಕ್ಯಾಂಟೀನಿನಲ್ಲಿ ಕಾಪಿ ಮುಗಿಸಿಗಾಳಿಗೆ ಕೂತಿದ್ದರು. ಇತ್ತರಹೀಮನ ರಕ್ತ ಸಣ್ಣ ಕೊಳವೆಯೊಳಗಿಂದ ಬಡೇಬಾನದೇಹದೊಳಗೆ ಒಂದೊಂದೇ ಹನಿ ಸೇರಿಕೊಳ್ಳುತ್ತಿತ್ತು. 'ಈ ವಿಷಯ ನಿಮ್ಮ ದೊಡಮ್ಮನಿಗೆ ಗೊತ್ತಾಗೋದು ಬ್ಯಾಡ. ಅಕಿ ಬಲು ಶೀಲವಂತಿ. ಅದಾಗಿ ಅಕೇನಾರ ಕೇಳಿದ್ರ ನಿಮ್ಮದ್ಯಾರದೋ ದೋಸ್ತ್ರದು ಅನ್ನು!' ಎಂದು ರುಕಿಯಾ ಅಬ್ರಾಮನ ಕಿವಿಯಲ್ಲಿ ಪಿಸುಗುಟ್ಟಿದಳು. 'ನಮ್ಮ ದೋಸ್ತಾನ ಜಾತೀನೂ ಕೇಳಿದ್ರೆ?' ಅನ್ನೋ ರಾಮನಕೇಣಕುವ ಪ್ರಶ್ನೆಗೆ ತಲೆಗೊಂದು ಮೊಟಕಿ 'ಬರಿ ಒಣಒಣ ಟಣಟಣಿ ಪ್ರಶ್ನಿ ಕೇಳ್ತಿ ನೋಡಪ್ಪ ಸೂಗಪ್ಪ' ಎಂದು ಸ್ವಾಟೆಯನ್ನೊಮ್ಮೆ ತಿವಿದು ತಾನು ಹೇಳುತ್ತಿರುವುದು ಯಾಕೆಂದು ನಿಂಗೆ ಸ್ಪಷ್ಟವಾಗಿ ಅರ್ಥವಾಗುತ್ತಿದೆ ಸುಮ್ಮನೆ ನಾಟ್ಕ ಆಡಬ್ಯಾಡ ಅನ್ನೋ ರೀತಿಯಲ್ಲಿ ಮುಖ ಊದಿಸಿ ಕೂತಳು.

ಸಯ್ಯದ ಬೇಕಂತಲೇ 'ದೊಡಪ್ಪ ಸ್ವಲ್ಪ ಕುಡಿಯೋದು ಕಡಿಮಿ ಮಾಡ್ಬೇಕಿತ್ತು. ಇತ್ತಿತ್ಲಾಗಂತೂ ಮಧ್ಯಾನ ಅನ್ನಂಗಿಲ್ಲ! ರಾತ್ರಿ ಅನ್ನಂಗಿಲ್ಲ! ಆ ಮಟನ್ ಅಂಗಡಿ ಲಕ್ಷ್ಮಣನ ಜತಿ ಸೇರಿ ಕುಡಿಯಾದ ಕುಡಿಯಾದ... ನಮ್ಮ ಘನಾತ ಏನು? ಗೌರ್ವ ಏನು? ಅನ್ನೋದನ್ನ ಲೆಕ್ಕ ಅಕ್ಷಣದೇನೇ ಆ ಮಾಂಸ ಕಡಿಯೋ ಬುಚ್ಚರ್ ಮಂದಿ ಅಂತೇಕ ಗೆಣೆತನ ಮಾಡಿ ಯಾವಾಗ್ಲೂ ನಶೆಯಾಗಿರೋದ್ನ ನೋಡಿ ಜನ ನಗ್ತಿದ್ರು... ಯಾರೂ ಹೇಳೋರಿಲ್ಲ ಕೇಳೋರಿಲ್ಲ' ಎಂದು ಸಿಕ್ಕ ಅವಕಾಶವನ್ನು ಉಪಯೋಗಿಸಿಕೊಂಡು ಸಯ್ಯದ ತುಸು ಕೋಪದಿಂದಲೇ ತನ್ನ ದುಗುಡ ಹೊರಹಾಕಿದ್ದ. ಸಕೀನಾ ಸುಮ್ಮನೆ ತನ್ನ ದೃಷ್ಟಿ ನೇರಕ್ಕೆ ಕಾಣುತ್ತಿದ್ದ ಆಸ್ಪತ್ರೆಯ ಹೊರಗಿನ ಗೇಟನ್ನೇ ನೋಡುತ್ತಾ ಕುಳಿತಿದ್ದಳು. ಅವಳಿಗೆ ಗೊತ್ತಿತ್ತು. ಮಾತನಾಡುವುದಕ್ಕೆ ಇದು ಸರಿಯಾದ ಸಮಯವಲ್ಲ ಎಂದು! ಕುಡಿತ ಮಿತಿಮೀರಿದ ದಿನಗಳಲ್ಲಿ, ಬೀಪಿಶುಗರ್‌ಕಿಡ್ನಿ ಸಮಸ್ಯೆ ಬೆವರಿನಂತೆ ಕಾಣಿಸಿಕೊಳ್ಳುವಾಗ ಉಗುರು ಕತ್ತರಿಸುವ ಕೆಲಸದಲ್ಲಿ ಬಲಗಾಲ ಉಂಗುಷ್ಟ ಸಮೇತ ಕಿತ್ತು ಬಂದು ಕೀವಾಗಿ ಅಂಗಾಲಿನಿಂದ ಮೊಣಕಾಲಿನವರೆಗೆ ಕೀವು ಹಬ್ಬಿ ಇನ್ನೇನು ಕಾಲು ಕತ್ತರಿಸುವುದೊಂದೇ ಮಾರ್ಗೋಪಾಯವಾಗದೆ ಉಳಿದು ಚೇತರಿಸಿಕೊಳ್ಳುತ್ತಿರುವ ತನ್ನ ಗಂಡನ ಬಗ್ಗೆ ಆಡುತ್ತಿರುವ ಕಾಳಜಿ ಲೇಪಿತ ಕತ್ತಿ ಇರಿತದ ಮಾತನ್ನ ಮೌನದಿಂದಲೇ ಸಹಿಸಿಕೊಂಡಳು.ಕೂಡಲೇ ಶೌಚದ ನೆಪವೊಡ್ಡಿ ಕೆಳಮಹಡಿಯ ನಡುವಿಗೆ ಬಂದು ಅಲ್ಲಿಯೇ ಮಧ್ಯದಲ್ಲಿದ್ದ ಗಣಪತಿಯ ಮೂರ್ತಿಗೆ ಚಪ್ಪಲಿಬಿಟ್ಟು ಕೈಮುಗಿದಳು. ಅಬ್ರಾಮ ಅವಳ ಕೈಹಿಡಿದುಕೊಂಡಿದ್ದ. 'ಈ ಆಸ್ಪತ್ರ್ಯಾಗ ನೋಡು... ನಾವು ಬೆಕ್ಕಿನಂಗೆ ಸಾಕಿ ಬೆಳೆಸೋ ಜಾತಿಗಳು ದಿವಾಳಿಯೆದ್ದು ಹೋಗೋದು. ಮನುಷಾನ ಜನ್ಮಾ ಅನ್ನೋದೇ ಎಲ್ಲಕಿಂತ ದೊಡ್ಡದು ಅನ್ನೋದು ಗೊತ್ತಾಗದು ಈ ಆಸ್ಪತ್ರೆಯಾಗಿನೇ!' ಎಂದು ತನ್ನ ಗಂಡನ ಚೇತರಿಕೆಗಾಗಿ ಕೈಮುಗಿದಳು...

ಅಬ್ರಾಮ ಒಬ್ಬನೇ ಸಿಕ್ಕಿರುವ ಈ ಹೊತ್ತಿನಲ್ಲೇಕಥೆಗಾರನಿಗೆ ಗೊತ್ತಿರುವ ಈ ವಿಷಯ ಹೇಳಿದಳು; 'ನಿಮ್ಮ ಬಾಬಾ ನಿಂಗೆ ಗೊತ್ತಿರೋವಂಗಮುಂಗೋಪಿ. ದೊಡ್ಡ ಬಾಯಿ ಅತಂದು. ಹುಲಿಯ ದನಿ. ಮದುವೆ ಮಾಡಿಕೊಂಡು ಬಂದಾಗ ಆಸ್ತಿಯಲ್ಲಿ ಒಂದು ರೂಪಾಯಿ ಭಾಗನೂ ಕೊಡದೆ ಹೊರಗಟ್ಟಿದ್ರು. ಇದ್ದಾ ಅಷ್ಟಕ್ಕಷ್ಟೇ! ಐದೋ ಆರೋ ಅಲ್ಲಿಗೆ ನಿಂತಿತ್ತು. ಆಮೇಲೆ? ಬದುಕಬೇಕಲ್ಲ! ಹಸ್ವು. ಬಳ್ಳಾರಿಯ ಭಣ ಭಣ ಬಿಸಿಲು. ಬೆವರು ಇಳಿಸದೆ ಹೊಟ್ಟೆಗೆ ಊಟ ಬೀಳ್ತಾದ್ರು ಹೆಂಗೆ? ಅವರಿವರ ಕಾಲು ಹಿಡಿದು ಸೀಮೆಎಣ್ಣಿ ಚಿಲ್ಲರೆ ವ್ಯಾಪಾರ ಶುರು ಮಾಡಿಕೊಂಡಿದ್ದು. ಜಗತ್ತು ಬದುಕುವುದೇ ಬೇರೆ ನೇಮಗಳ ಮೇಲೆ... ಊರಿನ ಬಸ್ಸುಗಳಿಗೆ ಬ್ಲ್ಯಾಕಿನಾಗೆ ಸೀಮೆ ಎಣ್ಣೆ ಮಾರಿಕಂಡ. ರಾತ್ರಿಗೆ ಡ್ರೈವರಾಗಿ ಊರೂರು ಸುತ್ತಿದ. ಬೇರೆ ಬೇರೆ ಭಾಷೆ ಕಲ್ತ. ರೊಕ್ಕಕ್ಕ ರೊಕ್ಕ, ಪೈಸಕ್ಕ ಪೈಸಾ ಕೂಡಿಕ್ಕಿ ಕೂಡಿಕ್ಕಿ ಮನಿಯಾತು. ಅಕ್ಕ ಪಕ್ಕದಲ್ಲಿ ಒಂದಿಷ್ಟು ಸೈಟುಗಳಾದುವು. ಜನ ನಮ್ಮನ್ನ ನೋಡಿ ಉರಿದುರಿದು ಬಿದ್ರು. ಮನಿ ಮುರ್ದು ಮನಿ ಮಾಡಿಕ್ಯಂಡರೆ ಅಂತ ಲಟ ಲಟ ಲಟಿಕೆ ಮುರುದ್ರು. ಆದ್ರೆ ನೀನೆ ಒಂದ್ಸಲ ಯೋಚ್ನೆ ಮಾಡು... ಈ ದುನಿಯಾ ನಮಗೆ ಬೇರೆ ಯಾವ ನೀತಿಯ ಮಾರ್ಗ ಕಾಣಿಸಿರಲಿಲ್ಲ. ನಿನ್ನ ಬಾಬಾ ಒಬ್ಬ ಛಲಗಾರ... ಕಡೆಮಗನನ್ನ ಮುದ್ದು ಮಾಡಿ ಹಿರಿ ಮಗನನ್ನ ನಯಾಪೈಸೆ ಕೊಡದೆ ಹೊರಹಾಕಿದ್ರು. ಅವರಿಗೆ ಬದುಕಿ ತೋರಿಸಬೇಕಿತ್ತು. ತೆಂಗಿನ ಮರದ ಹಾಗೆ ಬೆಳೆದು ನಿಂತ. ಇದ್ರ ಮಧ್ಯೆ ಕುಡಿತ ಗಿಡಿತ ಚಟ ಚಾಳಿ ಎಲ್ಲವು ಅಂಟ್ಕ್ಯಂದ್ವು. ಅದು ರೊಕ್ಕದ ಮದದ ಜತಿಗೆ ಫ್ರೀ ಬರ್ತತೇನೋ... ನಿಮ್ಮ ಬಾಬಾ ಅನ್ನೋ ಗಿಡ್ಡನಿಗೂ ಬುದ್ಧಿ ಬರ್ಬೇಕಿತ್ತು... ಈಗ ಆಸ್ಪತ್ರೇಲಿ ಬಿದ್ದವ್ನೆ. ಸರಿಯಿರ್ವಾಗಹೊಲಿದುಕೊಂಡಿದ್ದ ಬಾಯಿಗಳು ಹೊಲಿಗೆ ಬಿಚ್ಚಿ ಮಾತಾಡಿಕ್ಯಾಣಕತ್ತಾವು...'

'ಮತ್ತೆ ಈ ಲಕ್ಷ್ಮಣ?'

'ನಿಮ್ಮ ಬಾಬಾನ ಟೇಪ್ ರಿಕಾರ್ಡರನ್ನ ಆ ಲಕ್ಷ್ಮಣ ಅದು ಹೆಂಗೋ ಮಟನ್ ಕಡಿತ ಕಡಿತ ಬೇಜಾರ್ ಮಾಡಿಕಳ್ಳದಂಗೆ ಕೇಳಿಸಿಕೊಳ್ತಾನೆ. ದಿನಾಲು ಅದೇ ಕಥೆನೇ! ತಾನೆಂಗೆ ದುಡಿದೆ. ಆಗಿನ ಕಾಲ ಹೆಂಗಿತ್ತು... ಎಷ್ಟು ಕಷ್ಟಪಟ್ಟೆ ಹಿಂಗೇ. ನನಗೆ ಕೇಳಿ ಕೇಳಿ ಸಾಕಾಗಿದೆ. ನೀನು ಮುಂಬೈಯೊಳಗಿರ್ತಿ. ನಿನ್ನಮ್ಮಿಯಂತೂ ಮನೆಕೆಲ್ಸ. ಇನ್ಯಾರು ಕೇಳ್ಬೇಕು? ಲಕ್ಷ್ಮಣ ಇದ್ದಷ್ಟು ದಿನ ನಮಗೆ ಕಾಟ ಕಡಿಮಿ' ಎಂದು ಕೊಕ್ಕೊಕ್ಕೆಂದು ನಗಲು ಶುರು ಮಾಡಿದಳು. ಅಬ್ರಾಮನ ಮುಖದಲ್ಲೂ ಒಂದು ನಗು ಅನಾಯಾಸವಾಗಿ ಸುಳಿಯಿತು.

'ನಮಿಗೆ ಮಕ್ಕಳಾಗಲಿಲ್ಲ.ಮೊದ್ಲಿಗೆಸಯ್ಯದನನ್ನು ತಂದು ಸಾಕ್ಯಂದ್ವಿ. ಈ ಹಲ್ಕಟ್ ಭಾಡ್ಯೊ ಹೆಣ್ತಿ ಬಂದ ಮೇಲೆ ಬದಲಾದ... ನಾನು ಅವನ ಹೆಸರಿಗಿದ್ದ ನಾವಿರುವ ಮನೆ ಮತ್ತೆ ನಮ್ಮ ಹೆಸರಿಗೆ ಮಾಡಿಸಿಕೊಂಡೆ. ಈಗ ಆ ಜಾಗದಲ್ಲಿ ನೀನು. ಎಲ್ಲೋ ಗುಡಿಸಲಾಗಿದ್ದ ತಂಗಿ ರುಕಿಯಾ, ಮಗ ನೀನು ಇಲ್ಲಿಗೆ ಬಂದ್ರಿ... ನೀನು ಚೆನ್ನಾಗಿ ನೋಡಿಕೊಳ್ಳೋದಿಲ್ಲ ಅಂದ್ರೆ ಯಾವುದರ ಅನಾಥಾಶ್ರಮಕ್ಕೋ ವೃದ್ಧಾಶ್ರಮಕ್ಕೋ ಆಸ್ತಿ ಪಾಸ್ತಿಬರ್ದು ಗಂಡ ಹೆಣ್ತಿ ಇಬ್ರು ಹೋಗಿರ್ತಿವಿ ಅಷ್ಟೇ' ಎಂದು ಕಡ್ಡಿ ಮುರಿದ ಹಾಗೆ ಹೇಳಿ ಕಾರಲ್ಲಿ ಕೂತಳು. ಸೈಯ್ಯದ ಕಾರು ಚಾಲೂ ಮಾಡಿದ. ಭಾಬಿ

